**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಅಪರ ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**

**ಸಿ.ಸಿ. ಸಂಖ್ಯೆಃ 1308/2022**

**ಸಿ.ಡಬ್ಲೂ: 26 /ಪಿ.ಡಬ್ಲೂಃ 19**

**ಪ್ರಮಾಣೀಕರಿಸಿದ ದಿನಾಂಕಃ 18.07.2025**

| | |
|---|---|
| **ಹೆಸರು** | ರಾಜೇಶ್ವರಿ |
| **ಗಂಡನ ಹೆಸರು** | ಯಶವಂತ್ ಹೆಚ್ |
| **ವಯಸ್ಸು** | 35 ವರ್ಷ |
| **ವೃತ್ತಿ** | ಪಿ ಎಸ್ ಐ, ಬೆಸ್ಕಾಂ |
| **ಸ್ಥಳ** | ಚಿಕ್ಕಬಳ್ಳಾಪುರ |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದಃ-**

ನಾನು ನವೆಂಬರ್ 2020 ರಿಂದ ದಿಃ16.4.2022 ರವರೆಗೆ ಅಂಡರ್ ಸನ್ ಪೇಟೆ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ28.2.22 ರಂದು ಮದ್ಯಾಹ್ನ 1.15 ಗಂಟೆ ಸಮಯದಲ್ಲಿ ಕೆಜಿಎಫ್ ನ ಸರ್ಕಾರಿ ಆಸ್ಪತ್ರೆಯ ಒಪಿ ಇಂದ ಚಾಸಾ1 ರವರು ಹಲ್ಲೆ ವಿಚಾರವಾಗಿ ಚಿಕಿತ್ಸೆ ಪಡೆಯುತ್ತಿರುವ ಬಗ್ಗೆ ಮಾಹಿತಿ ಬಂದಿರುತ್ತದೆ. ನಂತರ ನಾನು ಮತ್ತು ಸಿಬ್ಬಂದಿಯಾದ ಪ್ರಕಾಶ್ ರಮರ ಕೆ ಜಿ ಎಫ್ ನ ಸರ್ಕಾರಿ ಆಸ್ಪತ್ರೆಗೆ ಬೇಟಿನೀಡಿ ಚಾಸಾ1 ರವರನ್ನು ವಿಚಾರಣೆ ಮಾಡಿ ವೈದ್ಯರ ಸಮಕ್ಷಮ ಹೇಳಿಕೆ ದೂರನ್ನು ಮದ್ಯಾಹ್ನ 1.45 ರಿಂದ 2.45 ರವರೆಗೆ ಪಡೆದಿರುತ್ತೇನೆ. ನಂತರ ಮದ್ಯಾಹ್ನ 3 ಗಂಟೆಗೆ ಠಾಣೆಗೆ ವಾಪಸ್ಸಾಗಿ ಹಾಲಿ ಪ್ರಕರಣದಂತೆ ಪ್ರ ವ ವರದಿಯನ್ನು ದಾಖಲಿಸಿರುತ್ತೇನೆ. ಸದರಿ ಪ್ರ ವ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಹಾಲಿ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ27 ರವರಿಗೆ ಕೊಟ್ಟಿರುತ್ತೇನೆ.

3. ಸಾಕ್ಷಿಯು ನಿಪಿ1 ರ ದಾಖಲೆಯನ್ನು ಜೊತೆಗೆ ಸಹಿಯನ್ನು ನೋಡಿ ಗುರ್ತಿಸುತ್ತಾರೆ. ಸದರಿ ಸಹಿಯನ್ನು ನಿಪಿ1 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರ ವ ವರದಿ ಮತ್ತು ಸಹಿಯನ್ನು ನೋಡಿ ಗುರ್ತಿಸಿದ್ದು, ಅದನ್ನು ನಿಪಿ18, ಸಾಕ್ಷಿ ಸಹಿ ನಿಪಿ18(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- 1 ನೇ ಆರೋಪಿ ಪರ ಶ್ರೀ ಎಸ್ ಆರ್ ಜೆ ವಕೀಲರಿಂದಃ-**

4. ಕೆಜಿಎಫ್ ನ ಸರ್ಕಾರಿ ಆಸ್ಪತ್ರೆಯಲ್ಲಿ ಪೊಲೀಸ್ ಒ ಪಿ ಇದೆ ಎಂದರೆ ಸರಿ. ಸಾಮಾನ್ಯವಾಗಿ ಹಲ್ಲೆಯ ವಿಚಾರವಾಗಿ ಗಾಯಾಳು ಹೋದರೆ ವೈದ್ಯರು ಪೊಲೀಸ್ ಒಪಿ ಗೆ ಮಾಹಿತಿ ಕೊಡುತ್ತಾರೆಂದರೆ ಸರಿ. ನಿಪಿ1 ರ ಹೇಳಿಕೆ ದೂರನ್ನು ಆಸ್ಪತ್ರೆಯಲ್ಲಿ ಪಡೆದು ಕೊಳ್ಳುವಾಗ ನಾನು ಸಹಿ ಮಾಡಿಲ್ಲ. ಘಟನೆ ನಡೆದ ದಿನದಿಂದ ನಿಪಿ18 ರ ಪ್ರ ವ ವ ದಾಖಲು ಮಾಡಿದ ದಿನಕ್ಕೆ ಸುಮಾರು 17 ಗಂಟೆಗಳ ಕಾಲ ವಿಳಂಬವಾಗಿರುವ ಬಗ್ಗೆ ನಿಪಿ18 ರ ಪ್ರ ವ ವ ಯಲ್ಲಿ ಕಾರಣ ನಮೂದು ಮಾಡಿಲ್ಲ. ನಾನು ಹೇಳಿದಂತೆ ಸಿಬ್ಬಂದಿ ಜೊತೆ ಹೋಗಿ ಚಾಸಾ1 ರವರ ಹೇಳಿಕೆ ದೂರನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ1 ರವರ ಮಾತುಕೇಳಿ ನಿಪಿ18 ರ ಪ್ರ ವ ವ ದಾಖಲು ಮಾಡಿರುತ್ತೇನೆಂದರೆ ಸರಿಯಲ್ಲ.

**<u>ಪಾಟೀ ಸವಾಲುಃ- 2ನೇ ಆರೋಪಿ ಪರ ಶ್ರೀ ಜಿ ಡಿ ವಕೀಲರಿಂದಃ-</u>**

5. ಚಾಸಾ1 ರವರು ಹೇಳಿಕೆಯಲ್ಲಿ 2ನೇ ಆರೋಪಿ ಬಗ್ಗೆ ಹೇಳಿರುವುದಿಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**(ವಿನೋದ್ ಕುಮಾರ್ ಎಂ )**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.